# ಅಧ್ಯಾಯ - ೩

# ಕಾಡುಗೊಲ್ಲರ ಕಾವ್ಯ ಪರಂಪರೆ ಮತ್ತು ಪರಿಕಲ್ಪನೆ

# ಅಧ್ಯಾಯ - 3

# ಕಾಡುಗೊಲ್ಲರ ಕಾವ್ಯ ಪರಂಪರೆ ಮತ್ತು ಪರಿಕಲ್ಪನೆ

ಆದಿಮಜನರ ಬದುಕಿನೊಂದಿಗೇ ರೂಪುಗೊಂಡ ಲಯಾತ್ಮಕ ಉದ್ಘಾರಗಳು, ಪ್ರಕೃತಿಯ ಸಹಜ ಸೀತ್ಕಾರಗಳೊಂದಿಗೆ ಬೆರೆತು ನಾದಕ್ಕೆ, ನರ್ತನಕ್ಕೆ ಬೀಜಮಂತ್ರಗಳಾದವು. ಮನುಷ್ಯ ನಿರ್ಮಿತ, ಪ್ರಕೃತಿ ಕೇಂದ್ರಿತ ಈ ಸಹಜ ನಾದ-ನರ್ತನಗಳಿಗೆ ಪೂರಕವಾಗಿ ಜನರ ಭಾವನೆ ಮತ್ತು ಅನುಭವಗಳಿಗೆ ತಕ್ಕ ಮಾಧ್ಯಮವಾಗಿ ಹಾಡುಗಳು ಅಂಕುರಗೊಂಡವು. ಹಲವಷ್ಟು ಕಾಲ ಮೌಖಿಕವಾಗಿ ಸಾಗಿಬಂದ ಈ ಹಾಡುಗಳು ಅಕ್ಷರಕ್ಕಿಳಿದು ಶಿಷ್ಟ ಕಾವ್ಯ ಸ್ವರೂಪವನ್ನು ಪಡೆದುಕೊಂಡವು. ಮುಂದೆ ಇದಕ್ಕೊಂದು ಮೀಮಾಂಸೆಯೂ ಹುಟ್ಟಿಕೊಂಡಿತು.

ಸಂವಹನ ಕ್ರಿಯೆಗಳಿಗೆ ಸಂಪರ್ಕ ಮಾಧ್ಯಮಗಳೇ ಇಲ್ಲದಿದ್ದ ಆ ಹೊತ್ತಿನಲ್ಲಿ ಮೌಖಿಕ ಹಾಡುಗಳೇ ಜನಾಂಗ-ಜನಾಂಗಗಳ ನಡುವೆ ಆಚಾರ-ವಿಚಾರ, ದೃಷ್ಟಿ ಧೋರಣೆಗಳನ್ನು ಬಿಂಬಿಸುತ್ತಿದ್ದವು. ತತ್ಪರಿಣಾಮವಾಗಿ ಸಮುದಾಯಗಳ ಸೃಜನಶೀಲಜಗತ್ತು ಅರಳಲು ಮೂಲ ಕಾರಣವಾಯ್ತು. 'ಕಾಲಾನಂತರ' ಭಾಷೆ ಲಿಖಿತಗೊಂಡಂತೆಲ್ಲ ಮಾನವನಲ್ಲಿ ಜೀವ ವಿಕಾಸದ ಕ್ರಿಯೆಗಳು ಬದಲಾಗುತ್ತಲೇ ನಡೆದವು. ಭಾಷೆ ಆನಂತರದ ನಾಗರೀಕತೆಗಳ ಸಾಂಸ್ಕೃತಿಕ ಸಂವಹನಕ್ಕೆ ಲಿಖಿತ ಮಾಧ್ಯಮವಾಯಿತು. ಮೌಖಿಕ ಹಾಗೂ ಲಿಖಿತ ಪರಂಪರೆಗಳೆರಡೂ ಈ ಸಂವಹನ ಪ್ರಕ್ರಿಯೆಗಳನ್ನು ಉಳಿಸಿಕೊಂಡವು' ಎಂದು ಡಾ|| ನಿಂಗಪ್ಪಮುದೇನೂರು ಅಭಿಪ್ರಾಯ ಪಡುತ್ತಾರೆ (ಕನ್ನಡ ಜನಪದ ಮಹಾಕಾವ್ಯಗಳ ಸಾಂಸ್ಕೃತಿಕ ವೀರರುಪು:15)

ಮೌಖಿಕ ಹಾಡುಗಳನ್ನು ತ್ರಿಪದಿಗಳು, ಲಾವಣಿಗಳು, ಕಥನ ಗೀತೆಗಳೂ, ಕಾವ್ಯಗಳು, ಮಹಾಕಾವ್ಯಗಳು ಮುಂತಾಗಿ ವಿದ್ವಾಂಸರು ಅಧ್ಯಯನಕ್ಕಾಗಿ ಸಾಮಾನ್ಯ ವರ್ಗೀಕರಣ ಮಾಡಿದ್ದಾರೆ. ಈ ಎಲ್ಲಾ ವರ್ಗೀಕರಣವೂ ಕಾಡುಗೊಲ್ಲರ ಪದಗಳಲ್ಲಿ ಅಂತರ್ಗತವಾಗಿ ಹರಿದು ಬಂದಿವೆ. ಕಾಡಡವಿಯ ಗರ್ಭದೊಳಗೆ ಬದುಕುತ್ತಿದ್ದ ಕಾಡುಗೊಲ್ಲರ ಬದುಕೇ ಕಾವ್ಯವಾಗಿ ಹೊರ ಹೊಮ್ಮಿರುವುದು ಸುಸ್ಪಷ್ಟ. ಕಾಡುಗೊಲ್ಲರ ಯಾವುದೇ ಹಟ್ಟಿಗೆ ಹೋದರೂ ಅಲ್ಲಿ ಕಥೆಯನ್ನು ಹೇಳುವ, ಪದಗಳನ್ನು ಹಾಡುವ, ಕಾಲಿಗೆ ಗೆಜ್ಜೆಕಟ್ಟಿ ಕೋಲು ಹೊಡೆದು ಕೇಕೆ ಹಾಕುವ ಹತ್ತಾರು ಕಲಾವಿದರನ್ನು ಕಾಣಬಹುದು. ಅಷ್ಟೊಂದು ಸಮೃದ್ಧವಾಗಿ ಸಾಹಿತ್ಯ-ಕಲೆ ಕಾಡುಗೊಲ್ಲರಲ್ಲಿ ಮನೆ ಮಾಡಿದೆ. 'ಜನಪದ ಸಾಹಿತ್ಯದ ದೃಷ್ಟಿಯಿಂದ ಒಂದೊಂದು ಗೊಲ್ಲರಹಟ್ಟಿಯೂ ಒಂದೊಂದು ಗಣಿ' ಎಂಬ ಡಾ.ತೀ.ನಂ.ಶ ರವರ ಮಾತು ಅತಿಶಯೋಕ್ತಿ ಆಗಲಾರದು.

ಕಾಡುಗೊಲ್ಲರು ತಲತಲಾಂತರವಾಗಿ ಒಂದು ಪರಂಪರೆಯ ಚೌಕಟ್ಟಿನಲ್ಲಿ ಹಾಡಿಕೊಂಡು ಬಂದಿರುವ ಪದ್ಯ ಸಾಹಿತ್ಯವನ್ನು ಸೋಬಾನೆಪದಗಳು, ಕೋಲುಪದಗಳು, ಗಗ್ಗರ ಪದಗಳು, ಈರಗಾರರ ಕಥನಗಳು, ಗಣೆ ಕಾವ್ಯಗಳು ಹಾಗೂ ಮಹಾಕಾವ್ಯಗಳೆಂದು ಸ್ಥೂಲವಾಗಿ ವರ್ಗೀಕರಿಸಬಹುದು.

**ಸೋಬಾನೆ ಪದಗಳು :**

ಕಾಡುಗೊಲ್ಲರು ಮೊದಲು ಏಳುದಿನಗಳ ಕಾಲ ಮದುವೆಕಾರ್ಯವನ್ನು ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಇಂದಿನ ಆಧುನಿಕ ಮನರಂಜನಾ ಸಾಧನಗಳಿಲ್ಲದ್ದರಿಂದ ಹಾಡುಗಳೇ ಆ ಕೊರತೆಯನ್ನು ನೀಗಿಸುತ್ತಿದ್ದವು. ಹಾಗಾಗಿ ಆ ಏಳು ದಿನಗಳಲ್ಲಿ ಮದುವೆ 'ಚಪ್ಪರ' ಹಾಕುವುದರಿಂದ 'ಮನೆಸೇರಿಸುವ' ವರೆಗಿನ ಎಲ್ಲಾ ಆಚರಣೆಗಳಿಗೆ ಸಂಬಂಧಿಸಿದಂತೆ ಆಯಾ ಸಂದರ್ಭಕ್ಕನುಗುಣವಾಗಿ ಪದಗಳನ್ನು ಕಟ್ಟಿ ಹಾಡುತ್ತಿದ್ದರು. ಒಳ್ಳಕ್ಕಿಪದಗಳು, ಹಾಲಸ್ತಪದಗಳು, ಹಸೆಪದಗಳು – ಕಾಡುಗೊಲ್ಲರಲ್ಲಿ ವಿಶೇಷವಾಗಿ ಗಮನಿಸುವಂಥ ಹಾಡುಗಳು ಮದುವೆಯ ಎಲ್ಲಾ ಕಾರ್ಯದುದ್ದಕ್ಕೂ ನಿರಂತರವಾಗಿ ಸೋನೆಮಳೆ ಸುರಿದಂತೆ ಹಾಡುತ್ತಿದ್ದ ಸೋಬಾನೆ ಪದಗಳದ್ದೇ ಸಾಮ್ರಾಜ್ಯ. ಅಂದಿನ ಅವರ ಬದುಕಿನ ಶೈಲಿಯೊಳಗೆ ಹಾಡು ಬೆರೆತು ಹೋಗಿತ್ತು.

**ಕೋಲುಪದಗಳು :**

ಕಾಡುಗೊಲ್ಲರ ಪ್ರದರ್ಶನಾತ್ಮಕ ಪ್ರಮುಖ ಕಲೆಯೆಂದರೆ ಕೋಲಾಟ. 'ಕೋಲು ಹಾಕದ ಗೊಲ್ಲನಿಲ್ಲ' ಎಂಬ ಮಾತೊಂದು ಇದೆ. ಈ ಕೋಲಾಟಕ್ಕೆ ಪೂರಕವಾಗಿ ಹಾಡುಗಳನ್ನು ಕಟ್ಟಿಕೊಂಡು ಹಾಡುತ್ತಾ ಕುಣಿದು ಕುಪ್ಪಳಿಸುವುದು ಗೊಲ್ಲರಲ್ಲಿ ಸಾಮಾನ್ಯವಾಗಿರುತ್ತದೆ. ಪ್ರೀತಿ, ಪ್ರೇಮ, ಪ್ರಣಯದ ವಿಷಯದಿಂದ ಮೊದಲ್ಗೊಂಡು ಕುಲದ ಪುರಾಣಪುರುಷರು, ಐತಿಹಾಸಿಕ ವ್ಯಕ್ತಿಗಳು, ಜಾತ್ರೆಜಾನುವಾರು, ಹಬ್ಬಹರಿದಿನಗಳೆಲ್ಲ ಗೊಲ್ಲರ ಕೋಲುಪದಗಳಲ್ಲಿ ಮೈದಾಳಿ ಅರಳುತ್ತವೆ.

**ಗಗ್ಗರದ ಪದಗಳು :**

'ಒಕ್ಕಲಿಗರ ಮದುವೆನೋಡು, ಗೊಲ್ಲರ ದೇವರುನೋಡು' ಎಂಬ ಗಾದೆ ಮಾತೊಂದಿದೆ. ಗೊಲ್ಲರು ದೇವರ ಬಗ್ಗೆ ತೀವ್ರವಾದ ಭಯ ಭಕ್ತಿ ಗೌರವವನ್ನು ತೋರುವವರು. "ಅಂಬು–ಕೊಂಬು, ಗುಡಿ–ಕಟ್ಟೆ" ವರೆಗಿನ ಪ್ರತೀ ದೇವರುಗಳನ್ನು ಅತ್ಯಂತ ಶ್ರದ್ಧಾ ಭಕ್ತಿಯಿಂದ ಪೂಜಿಸುವ ಗೊಲ್ಲರ ಹಬ್ಬಹರಿದಿನ ಜಾತ್ರೆಗಳಲ್ಲಿ ಹಾಗೂ ಕೆಲವು ವಿಶೇಷ ಸಂದರ್ಭದಲ್ಲಿ **'ದೇವರನ್ನುಹೊರಡಿಸುವ'**, **'ದೇವರನ್ನುಕುಣಿಸುವ'** ಸಂದರ್ಭದಲ್ಲಿ ವಾಲಗವನ್ನು ನಿಲುಗಡೆಗೊಳಿಸಿ ಒಂದು ಕ್ಷಣ ಸಂಬಂಧಿಸಿದ ದೇವರನ್ನು ಕುರಿತಂತೆ 'ದೀರ್ಘಸ್ವರದಲ್ಲಿ' ಒಬ್ಬ ಹಾಡುತ್ತಾನೆ. ಹಾಡುವಾಗ ಮಧ್ಯ ಮಧ್ಯ ಇತರೆಯವರು 'ಓಹೋ' ಎಂಬ ಉದ್ಗಾರ

ಹಾಕುತ್ತಾರೆ. ನಂತರ ವಾಲಗ ಮುಂದುವರಿಯುತ್ತದೆ. ಈ ಸಂಪ್ರದಾಯ ಹಾಡುಗಳನ್ನು ಗಗ್ಗರ ಪದಗಳೆಂದು ಕಾಡುಗೊಲ್ಲರೇ ಹೆಸರಿಸುತ್ತಾರೆ. ಈ ಹಾಡುಗಳು ತಾರಕ ಧ್ವನಿಯ ವಿಶಿಷ್ಟ ಲಯಾತ್ಮಕ ವಾಗಿರುತ್ತದೆ.

**ಗಣೆಪದಗಳು :**

ಮಾದಪ್ಪನ ಕಥೆ ಹೇಳಲು ಕಂಸಾಳೆ, ಮಂಟೆಸ್ವಾಮಿಗೆ ಏಕತಾರಿ, ಎಲ್ಲಮ್ಮನಕಥೆಗೆ ಚೌಡಿಕೆ, ಬೀರಪ್ಪನಿಗೆ ಡೊಳ್ಳು, ಮೈಲಾರನ ಕಥೆಗೆ ಡಮರು ಪಕ್ಕವಾದ್ಯಗಳಿರುವಂತೆ ಗೊಲ್ಲರ ಕಾವ್ಯ ಕಥೆಗಳ ಹಾಡುಗಾರಿಕೆಗೆ ಸಾಮಾನ್ಯವಾಗಿ **'ಗಣೆ'** ಪಕ್ಕವಾದ್ಯವಾಗಿ ಬಳಕೆಯಾಗುತ್ತಿದೆ. ಹಾಗಾಗಿ ಇವುಗಳನ್ನು ಗಣೆಪದಗಳು, ಗಣೆಕಾವ್ಯಗಳೆಂದೇ ವಿದ್ವಾಂಸರು ಪರಿಗಣಿಸಿದ್ದಾರೆ. ಗಣೆಕಾವ್ಯ ಕಾಡುಗೊಲ್ಲರಿಗೇ ವಿಶಿಷ್ಟ ವಾಗಿದ್ದು ಕಾಡುಗೊಲ್ಲರು ಮಾತ್ರ ಹಾಡುವ ಅಪರೂಪದ ಜನಪದ ಕಾವ್ಯ ಪ್ರಕಾರ. ದಕ್ಷಿಣ ಕರ್ನಾಟಕದ ಕಾವ್ಯ ಪ್ರಕಾರಗಳಿಗೆ ಗಣೆ ಸಂಪ್ರದಾಯವನ್ನು ಹೋಲಿಸಿದರೆ ಅವೆಲ್ಲವಕ್ಕಿಂತ ಭಿನ್ನವಾದ ಪಶುಪಾಲಕ ಸಂಸ್ಕೃತಿಯ ಕಥೆಗಳನ್ನೊಳಗೊಂಡ 'ಗಣೆಪ್ರಕಾರ' ಪದ್ಯಗಂಧಿಯಾದ ಗದ್ಯ. ಅಲ್ಲಲ್ಲಿ ಪೂರ್ಣಗದ್ಯಮಯವಾಗಿ ಮತ್ತೆ ರಸಮಯ ಪ್ರಕರಣ ಬರುತ್ತಲೇ ಸಹಜಕಾವ್ಯದಿಂದ ಮಿಂಚುವ ಈ ಪ್ರಕಾರ ಚಂಪು ಶೈಲಿಯನ್ನು ಹೋಲುತ್ತದೆ. ಕಥೆಯ ಉದ್ದಕ್ಕೂ ಸಿದ್ಧ ನುಡಿಕಟ್ಟುಗಳು ಮಿಂಚುತ್ತವೆ. 'ಬೆಲ್ಲಬೇಯೊವತ್ತು, ಹರಿಯೊಗಂಗಮ್ಮ ನಿಂತು ನಿದ್ದೆ ಮಾಡೋವೊತ್ತು, ಪಕ್ಸಿ ಜಲಪ ಮಾಡೋವೊತ್ತು, ಎದೆಮ್ಯಾಗಳ ಪುಷ್ಪ ಅರಳೊವೊತ್ತು.... ಮುಡಿಗೆ ಮುನ್ನೂರುಬಾಣ ನಡುವಿಗೆ ನಾನ್ನೂರು ಬಾಣ, ದೊಕ್ಕೆಗೆ ಐನೂರು ಬಾಣ, ಅಂಗೈಲಿ ಹಾವಿನ ಬಾಣ, ಮುಂಗೈಲಿ ಚೇಳಿನ ಬಾಣ, ನೆತ್ತೀಲಿ ನೆತ್ತರ ಬಾಣ, ಧರಿಸಿ.... ಕೆಸರಲ್ಲಿ ಹುಟ್ಟಿದೋನೆ ದಸರುಗೊಂಬಿನ ಬಟ್ಟಣ್ಣ, ನೀರಾಗುಟ್ಟಿದೋನ್ ಲೋಲ ಪರದೇಶಿ ಬಟ್ಟಣ್ಣ, ಕಂಬೀಲಿ ಗಂಭೀರ ನಾಲಿಗೇಲಿನ ನಕ್ಷತ್ರ, ಬಾಲದಲಿಬಲವಂತ, ಕಡುಚಲುವ ಬಟ್ಟಣ್ಣ.... ಇಂಥ ವಾಕ್ಯಗಳು ಅಲ್ಲಲ್ಲಿ ಪ್ರಾಸದಿಂದ, ಲಯದಿಂದ ಕಂಗೊಳಿಸಿ ಕಾವ್ಯಾನುಭೂತಿಯನ್ನು ಉಂಟುಮಾಡುತ್ತವೆ. 'ಶಿಷ್ಟಕಾವ್ಯದ ಯಾವ ಆಡಂಬರ ಅಬ್ಬರಗಳಿಲ್ಲದ ಈ ಗಣೆಕಾವ್ಯಗಳು ವಚನಾನುಭೂತಿಯನ್ನು, ಹೃದಯಕರಗಿಸುವ ಆದ್ರತೆಯನ್ನುಂಟು ಮಾಡುತ್ತವೆ. ಗಣೆಕಾವ್ಯದ ಹಾಡಿಕೆ ಗಮಕ ಶೈಲಿಯನ್ನು ಹೋಲುತ್ತವೆ' ಎಂಬ ಡಾ|| ಮೀ.ಶಿ. ಯವರ. ಮಾತುಗಳು ಗಣೆಕಾವ್ಯಗಳ ಅಂತಃ ಸತ್ವವನ್ನು ಹಿಡಿದಿಡುತ್ತವೆ. (ಮೀ.ಶಿ. ಕಾ.ಬು.ವೀ-ಪು : 540).

ಗಣೆಕಾವ್ಯಗಳನ್ನು ಹಾಡುವವರಲ್ಲಿ ಸಾಂಪ್ರದಾಯಿಕ ಹಾಡುಗಾರರು ಮತ್ತು ವೃತ್ತಿಗಾಯಕರು ಎಂಬ ಎರಡು ಬಗೆಯವರಿದ್ದಾರೆ. ಸಾಂಪ್ರದಾಯಿಕ ಹಾಡುಗಾರರು ಸಾಂದರ್ಭಿಕವಾಗಿ ಮದುವೆ, ಹಬ್ಬಹರಿದಿನ ಇತ್ಯಾದಿ ಸನ್ನಿವೇಶಗಳಲ್ಲಿ ಮೂರುನಾಲ್ಕುದಿನ ಅಹರ್ನಿಶಿ ಹಾಡುವ ಸಾಮರ್ಥ್ಯವನ್ನು ಪಡೆದವರಾಗಿರುತ್ತಾರೆ. ವೃತ್ತಿಗಾಯಕ ಗುಂಪಿಗೆ ಜುಂಜಪ್ಪನ ಗಣೆಯವರು ಸೇರುತ್ತಾರೆ. ಇವರು ಅಲಂಕೃತ ಜುಂಜಪ್ಪನ ಬಸವನನ್ನು ಜೊತೆಯಲ್ಲಿ ಇಟ್ಟುಕೊಂಡು ಗಣೆಗೆ ನಾಗರಹೆಡೆಯನ್ನು ಸುತ್ತಿಕೊಂಡು ಊರೂರು ಅಲೆಯುತ್ತ ಭಿಕ್ಷಾಟನೆಗೆ

ಹೋಗುತ್ತಾರೆ. ಹೋದೆಡೆಯಲ್ಲಿ ಭಕ್ತರು ಅಪೇಕ್ಷಿಸಿದಾಗ ಗಣೆಯೊಂದಿಗೆ ಜುಂಜಪ್ಪನ ಪದಗಳನ್ನು ಹಾಡುತ್ತಾರೆ. ಊರಿಂದೂರಿಗೆ ಚಲಿಸುವ ಈ ಗಣೆಯವರನ್ನು 'ಕಥೋಪಜೀವಿ'ಗಳೆಂದು ಪರಿಗಣಿಸಿರುವ ಡಾ.ಜೀ.ಶಂ.ಪ. ರವರು ಇವರನ್ನು ವೃತ್ತಿಗಾಯಕ ವರ್ಗಕ್ಕೆ ಸೇರಿಸಿರುತ್ತಾರೆ.

**ಈರಗಾರರ ಕಥನಗಳು :**

ಓರ್ವವ್ಯಕ್ತಿ ತಾನು ಬದುಕಿದ್ದ ಜೀವಿತಾವಧಿಯಲ್ಲಿ ಅಸಮಾನ್ಯ ಧೈರ್ಯ ಸಾಹಸ ಪರಾಕ್ರಮ ಮೆರೆದು ಎದುರಾದ ವೈರಿಗಳೆದುರು, ಕ್ರೂರ ಪ್ರಾಣಿಗಳೆದರು ಹೋರಾಟನಡೆಸಿ ಅಸಹಜ ಮರಣವನ್ನು ಹೊಂದಿ ಜನರಿಂದ ಪೂಜಿಸಿಕೊಳ್ಳುವವರನ್ನು ದ್ರಾವಿಡಸಂಸ್ಕೃತಿಯಲ್ಲಿ ವೀರಗಾರೆಂದು ಕರೆಯಲಾಗಿದೆ. ಇವರ ಹೆಂಡತಿಯರು ಧೀರೋದಾತ್ತವಾಗಿ 'ಸತಿ'ಗಳಾಗುವವರನ್ನು ಮಹಾಸತಿಗಳೆಂದು ಭಾವಿಸಲಾಗುತ್ತಿತ್ತು. ಇವರೇ ಗ್ರಾಮ್ಯದಲ್ಲಿ ಈರಗಾರರು-ಈರಗಾತಿಯರೆಂದು ಕರೆಯಲ್ಪಡುತ್ತಾರೆ. ಕಾಡುಗೊಲ್ಲರಲ್ಲಿ ಇಂಥ ಈರಗಾರರು-ಈರಗಾತಿಯರು ಹೆಚ್ಚಿನಸಂಖ್ಯೆಯಲ್ಲಿ ಇರುವುದನ್ನು ಕಾಣಬಹುದು. ಇವರ ಸಂಕೇತಗಳಾಗಿ ಗೊಲ್ಲರು ಅಲಗುಗಳನ್ನು, ಬಾಣಗಳನ್ನು, ಕುಂಭಗಳನ್ನು ಇಟ್ಟು ಪೂಜಿಸುವ ಪದ್ಧತಿ ರೂಢಿಯಲ್ಲಿದೆ. ಎತ್ತಪ್ಪ, ಜುಂಜಪ್ಪ, ಚಿತ್ತಯ್ಯ-ಕಾಟಯ್ಯರಂತೆ ಸಮಗ್ರ ಸಮುದಾಯವನ್ನು ಪ್ರತಿಬಿಂಬಿಸದ ಈ ಈರಗಾರರು ಆಯಾ ಪ್ರದೇಶದ ಅಂಬು-ಕೊಂಬು, ಕೊಲ-ಕುಲಗಳಿಗೆ ಸೀಮಿತವಾಗಿರುತ್ತಾರೆ.

ಕಾಡುಗೊಲ್ಲರಲ್ಲಿ ನೂರಾರು ಈರಗಾರರಿದ್ದಾರೆ. ಅವರಲ್ಲಿ ಡಾ.ಮೀ.ಶಿ.ಯವರು ಸುಮಾರು ಐವತ್ತಕ್ಕೂ ಹೆಚ್ಚು ಈರಗಾರರನ್ನು ಗುರ್ತಿಸಿ ಅವರ ಬಗ್ಗೆ ಸಾಹಿತ್ಯವನ್ನು ದಾಖಲಿಸಿದ್ದಾರೆ. ವಿಶ್ಲೇಷಣೆಯ ದೃಷ್ಟಿಯಿಂದ ಶ್ರೀಯತರು ಈರಗಾರರ ಕಥನಗಳನ್ನು ಈ ಮುಂದಿನಂತೆ ವಿಭಾಗಿಸಿದ್ದಾರೆ.

1) ಹಾಲಿನ ಪಾವಿತ್ರ್ಯ ಉಳಿಸಲು ಪ್ರಾಣತೆತ್ತವರು.
2) ದೇವರಿಗೋಸ್ಕರ ಹೋರಾಡಿದವರು.
3) ದನಗಳ ಹುಲ್ಲು-ನೀರಿನ ವರಕ್ಕಾಗಿ ಆತ್ಮಾರ್ಪಣೆ ಮಾಡಿಕೊಂಡವರು.
4) ಬ್ಯಾಡರ ದೌರ್ಜನ್ಯದಿಂದ ಸತ್ತವರು.
5) ಕಾಡು ಪ್ರಾಣಿಗಳಿಂದ ಹತರಾದವರು.
6) ಯುದ್ಧದಲ್ಲಿ ಮಡಿದವರು.
7) ಕಾಯಕದಲ್ಲಿ ದೇವರಾದವರು.
8) ಕ್ಷುಲ್ಲಕ ಕಾರಣದಿಂದ ಸತ್ತವರು.

**(ಕಾ. ಬು.ವೀ, ಪು : 184).**

ಈರಗಾರರ ಕಥನಗಳು ಹೆಚ್ಚಿನದಾಗಿ ತ್ರಿಪದಿರೂಪದಲ್ಲಿದ್ದು ಒಂದೊಂದೂ ಕಾವ್ಯದ ಆಕೃತಿಯನ್ನು ಪಡೆದಿರುತ್ತವೆ. ಈ ಕಾವ್ಯಗಳು ಗೊಲ್ಲ ಸಂಸ್ಕೃತಿಯ ಕೈಮರಗಳೆಂದೇ ಹೇಳಬಹುದು. ಇಷ್ಟೊಂದು

ಪ್ರಮಾಣದಲ್ಲಿ ಹುಲುಸಾಗಿ ಸೃಷ್ಟಿಗೊಂಡಿರುವ ಈರಗಾರರ ಕಥನ ಕಾವ್ಯಗಳು ಬೇರಾವುದೇ ಸಮುದಾಯದಲ್ಲಿ ಇರಲಿಕ್ಕೆ ಸಾಧ್ಯವಿರಲಾರದು.

**ಮಹಾಕಾವ್ಯಗಳು :**

ಮಹಾಕಾವ್ಯವೆಂಬುದು ಶಿಷ್ಟ ಸಾಹಿತ್ಯದ ಕಾವ್ಯಮೀಮಾಂಸೆಯ ಪರಿಕಲ್ಪನೆ. ಇದಕ್ಕೆ ಭಾರತದಲ್ಲಿ ಸಾವಿರಾರು ವರ್ಷಗಳ ಇತಿಹಾಸವಿದೆ. ಲಾಕ್ಷಣಿಕರ ಅಭಿಪ್ರಾಯವನ್ನು ಕ್ರೋಡೀಕರಿಸಿ ಪ್ರೊ|| ಸಿ.ಎನ್.ರಾಮಚಂದ್ರನ್ ಹೀಗೆ ಹೇಳುತ್ತಾರೆ- 'ಮಹಾಕಾವ್ಯವೆಂಬ ಸಾಹಿತ್ಯ ಪ್ರಬೇಧದ ಆಳದಲ್ಲಿ ಇತಿಹಾಸದ ಅಂಶಗಳನ್ನೊಳಗೊಂಡ ಒಂದು ದೀರ್ಘಕಥನ. ಈ ಕಥನದ ಧೀರೋದಾತ್ತನಾಯಕ ಅಸಮಾನ ಶಕ್ತಿಯುಳ್ಳ ಒಬ್ಬ ಮಹಾಪುರುಷ. ಇವನ ಶೌರ್ಯ, ಸಾಹಸ ಸಾಧನೆಗಳನ್ನು ದಾಖಲಿಸುವ ಕಥನ. ಅಷ್ಟದಶವರ್ಣನೆಗಳಿಂದ ಮತ್ತು ವಿವಿಧ ಅಲಂಕಾರಗಳಿಂದ ಕೂಡಿದ ಮಹಾಶೈಲಿಯಲ್ಲಿ ನಿರೂಪಿಸಲ್ಪಡುತ್ತದೆ. ಖಚಿತ ಆದಿ ಅಂತ್ಯಗಳನ್ನುಳ್ಳ ಮಹಾಕಾವ್ಯದ ಸಂಯೋಜನೆ ಕಾರ್ಯಕಾರಣದ ಸಂಬಂಧವನ್ನು ಆಧರಿಸಿದ ಸಾವಯವತೆಯನ್ನೊಳಗೊಂಡಿರುತ್ತದೆ.' (**ಹೊಸಮಡಿಯ ಮೇಲೆ-ಪ್ರಜಾವಾಣಿ ತಾ:**6-01-02).

ಶಿಷ್ಟ ಮಹಾಕಾವ್ಯಗಳ ಪರಿಕಲ್ಪನೆಯಲ್ಲೇ ಜಾನಪದದಲ್ಲೂ ಮಹಾಕಾವ್ಯಗಳನ್ನು ಗುರುತಿಸುವ ಪ್ರಯತ್ನವನ್ನು ಪಾಶ್ಚಾತ್ಯ ವಿದ್ವಾಂಸರು ನಡೆಸಿರುವುದು ಜಾನಪದಕ್ಷೇತ್ರದ ಹೊಸ ಆವಿಷ್ಕಾರಗಳಲ್ಲಿ ಒಂದಾಗಿದೆ. ಬೆಕ್‌ಬ್ರೆಂಡ್‌ನ ಪ್ರಕಾರ ಜನಪದ ಮಹಾಕಾವ್ಯಗಳ ಲಕ್ಷಣಗಳನ್ನು ಹೀಗೆ ಕ್ರೋಡೀಕರಿಸಬಹುದು.

1) ವೃತ್ತಿಗಾಯಕರು ಹಾಡುತ್ತಾರೆ.
2) ಉಳಿದ ಜನಪದ ಕಾವ್ಯ ಪ್ರಕಾರಗಳಿಗಿಂತ ಅದು ಅತ್ಯಂತ ದೀರ್ಘವಾಗಿರುತ್ತದೆ.
3) ಜನಪದ ಮಹಾಕಾವ್ಯದ ವೀರರು ಸ್ಥಳೀಯ ದೇವಾಲಯಗಳಲ್ಲಿ ಆರಾಧನೆಗೊಳ್ಳುವ ದೈವೀ ಸ್ವರೂಪಗಳು.
4) ಪೌರಾಣಿಕ ಹಾಗೂ ಸಾಂಸ್ಕೃತಿಕ ಪರಂಪರೆಗಳ ಜೊತೆ ಸಂಬಂಧ ಉಳ್ಳದ್ದಾಗಿರುತ್ತದೆ.
5) ಜನಪದ ಮಹಾಕಾವ್ಯಗಳಲ್ಲಿ ನಿರೂಪಿತ ಸಂಗತಿಗಳೆಲ್ಲ ಒಂದು ಕಾಲದಲ್ಲಿ ನಡೆದಿರುವ ಸತ್ಯಘಟನೆ ಅಥವಾ ಚರಿತ್ರೆ ಎನ್ನುವುದನ್ನು ಗಾಯಕರು ಹಾಗೂ ಶ್ರೋತೃಗಳು ಬಹುವಾಗಿ ನಂಬುತ್ತಾರೆ.

ಜನಪದ ಮಹಾಕಾವ್ಯಗಳ ಲಕ್ಷಣಗಳನ್ನು ಕುರಿತಂತೆ ಅನೇಕ ವಿದ್ವಾಂಸರು ಬೇರೆ ಬೇರೆ ದೃಷ್ಟಿಕೋನಗಳಿಂದ ಚರ್ಚಿಸಿದ್ದಾರೆ. ಮುಂದುವರಿದು ಜಾಗತಿಕ, ರಾಷ್ಟ್ರೀಯ ಹಾಗೂ ಪ್ರಾದೇಶಿಕ

ಮಹಾಕಾವ್ಯಗಳನ್ನು ಕೇಂದ್ರವಾಗಿರಿಸಿಕೊಂಡು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಹಲವು ಹತ್ತು ಅಧ್ಯಯನಗಳು ನಡೆಯುತ್ತಿರುವುದು, ಚಿಂತಿಸುತ್ತಿರುವುದು ಜನಪದ ಮಹಾಕಾವ್ಯಗಳ ಅಂತಃಸತ್ವಕ್ಕೆ ಹಿಡಿದ ಕೈಗನ್ನಡಿಯಾಗಿದೆ.

'ಪ್ರತಿಯೊಂದು ಬುಡಕಟ್ಟೂ ತನ್ನ ಸಾಂಸ್ಕೃತಿಕ ನೆಲೆಯನ್ನು, ಭೌಗೋಳಿಕ ವಿಸ್ತಾರವನ್ನು ತನ್ನ ಸಮುದಾಯದ ವಿಕಾಸದ ಸ್ತರಗಳನ್ನು, ಪರಂಪರೆಜ್ಞಾನವನ್ನು, ನಂಬಿಕೆ ನಡಾವಳಿಗಳನ್ನು, ಕಲೆಯ ವಿಚಾರಗಳನ್ನು, ನೀತಿನಿಯಮಗಳನ್ನು, ಬುಡಕಟ್ಟು ಒಳಗೊಳ್ಳಬಹುದಾದ ಅನೇಕ ಸಾಂಸ್ಕೃತಿಕ ವಿಚಾರ ಗಳನ್ನು ಜನಪದ ಬುಡಕಟ್ಟು ಮಹಾಕಾವ್ಯಗಳು ಅಭಿವ್ಯಕ್ತಿಸುತ್ತಾ ಬಂದಿವೆ' ಎಂಬ ಡಾ. ಚಂದ್ರು ಕಾಳೇನಹಳ್ಳಿಯವರ ಮಾತುಗಳು (ಕರ್ನಾಟಕ-ಜನಪದ-ಮಹಾಕಾವ್ಯಯಗಳು-ಪು:48) ಕಾಡುಗೊಲ್ಲರ ಮಹಾ ಕಾವ್ಯಗಳಿಗೆ ಅಕ್ಷರಶಃ ಅನ್ವಯಿಸುತ್ತವೆ. ಕಾಡಡವಿಯಲ್ಲಿ ಕಂಡುಂಡ ಬದುಕಿನ ನೋವು ನಲಿವುಗಳು ಹಾಗೂ ಅಪೇಕ್ಷೆ-ನಿರೀಕ್ಷೆಗಳ ಅಭಿವ್ಯಕ್ತಿಯಾಗಿ ಗೊಲ್ಲರಮಹಾಕಾವ್ಯಗಳು ರೂಪುಗೊಂಡಿವೆ. ಈ ಕಾವ್ಯಗಳಲ್ಲಿ ಗೊಲ್ಲರ ಪರಂಪರಾಗತ ಸಂಸ್ಕೃತಿಯ ಸೊಬಗಿನ ಜೊತೆ ಜೊತೆಯಲ್ಲೇ ಬದುಕಿನ ಸವಾಲಿನ ದಾರಿಗಳೂ ಗೋಚರಿಸುತ್ತವೆ. ಅಲ್ಲದೆ **"ಪರ್ಯಾಯಸಂತೃಪ್ತಿ"**ಯ ಮನೋಭಾವವೂ ಗುಪ್ತಗಾಮಿನಿಯಾಗಿ ಪ್ರವಹಿಸಲ್ಪಟ್ಟಿದೆ.

ಬ್ಲೇಕ್‌ಬರ್ನ್ ಮತ್ತು ಸಂಗಡಿಗರು ಭಾರತದ ಹದಿಮೂರು ಮಹಾಕಾವ್ಯಗಳನ್ನು ಗುರುತಿಸಿದ್ದಾರೆ. ಈ ಪಟ್ಟಿಯಲ್ಲಿ ಕಾಡುಗೊಲ್ಲರ 'ಜುಂಜಪ್ಪ' ಕಾವ್ಯವೂ ಸೇರ್ಪಡೆಯಾಗಿರುತ್ತದೆ. ಇದಕ್ಕೆ ಪೂರಕವಾಗಿ ಡಾ. ಮೀರಾಸಾಬಿಹಳ್ಳಿಶಿವಣ್ಣನವರು 'ಎತ್ತಪ್ಪ' ಕಾವ್ಯವನ್ನೂ ಸಹ ಮಹಾಕಾವ್ಯವೆಂದು ಪರಿಗಣಿಸಿದ್ದಾರೆ. ತದನಂತರದಲ್ಲಿ ಜನಪದಸಂಸ್ಕೃತಿ ಹಾಗು ಬುಡಕಟ್ಟು ಅಧ್ಯಯನಕಾರರೆಲ್ಲ ಈ ಎರಡೂ ಕಾವ್ಯಗಳನ್ನು ಬುಡಕಟ್ಟು ಮಹಾಕಾವ್ಯದ ಸಾಲಿನಲ್ಲಿಟ್ಟು ಚರ್ಚಿಸಲಾರಂಬಿಸಿದ್ದು ಸರಿಯಷ್ಟೆ. ಆದರೆ ಕಾಡುಗೊಲ್ಲರಲ್ಲಿ ಎತ್ತಪ್ಪ, ಜುಂಜಪ್ಪ ಮಹಾಕಾವ್ಯಗಳಷ್ಟೇ ಪ್ರಚಲಿತವಾಗಿರುವ, ಆ ಸ್ಥಾನಕ್ಕೆ ಏರಲು ಯಾವುದೇ ಕೊರತೆಯಿಲ್ಲದೆ ಮಹಾಕಾವ್ಯದ ಎಲ್ಲ ಅಂತಃಶಕ್ತಿಯನ್ನು ಹೊಂದಿರುವ ಇನ್ನಷ್ಟು ಕಾವ್ಯಗಳು ಇವೆ. ಅವುಗಳೆಂದರೆ, **ಚಿತ್ತಯ್ಯ-ಕಾಟಯ್ಯ (ಚಿತ್ರಲಿಂಗ ಕಾಟಮಲಿಂಗ) ಪಾತಪ್ಪ (ಪಾತೇಲಿಂಗ), ಕ್ಯಾತಪ್ಪ (ಕ್ಯಾತೆಲಿಂಗ ಕೇದಾರಲಿಂಗ)** ಇವು ಕಾಡುಗೊಲ್ಲರಲ್ಲಿ **"ಪಂಚಲಿಂಗ ಪದಗಳು"** ಎಂದು ಪ್ರಸಿದ್ಧವಾಗಿವೆ. ಈ ಪುರಾಣದೇವತೆಗಳ ಬಗ್ಗೆ ಇದುವರೆಗೆ ಸಂಗ್ರಹಿತವಾಗಿರುವ, ಪ್ರಕಟವಾಗಿರುವ ಸಾಹಿತ್ಯ ಅಪೂರ್ಣ ಹಾಗೂ ಅಸಮಗ್ರವಾಗಿ ಕೂಡಿರುವುದರಿಂದ ಈ ಕಥನಗಳು ವಿದ್ವಾಂಸರ ದೃಷ್ಟಿಯಲ್ಲಿ ಖಂಡ ಕಾವ್ಯಗಳೆಂದೇ ಪರಿಗಣಿಸಲ್ಪಟ್ಟಿವೆ.

ಬ್ಲೇಕ್‌ಮನ್ ಮತ್ತು ಸಂಗಡಿಗರು ತಾವು ಗುರುತಿಸಿರುವ ಭಾರತೀಯ ಮಹಾಕಾವ್ಯಗಳ ಭೌಗೋಳಿಕ ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು ನಾಲ್ಕು ಭಾಗವಾಗಿ ವರ್ಗೀಕರಣ ಮಾಡಿದ್ದಾರೆ. ಹತ್ತರಿಂದ ನೂರು ಮೈಲಿ ವ್ಯಾಪ್ತಿಯಲ್ಲಿ ಪ್ರಚಲಿತವಿರುವ ಕಾವ್ಯಗಳನ್ನು ಸ್ಥಳೀಯ ವರ್ಗವೆಂದೂ, ನೂರರಿಂದ ಇನ್ನೂರು ಮೈಲಿ ವ್ಯಾಪ್ತಿಗೆ ಉಪಪ್ರಾದೇಶಿಕ ವರ್ಗವೆಂದೂ, ಇನ್ನೂರು ಮೈಲಿಯಿಂದ ಮುನ್ನೂರು ಮೈಲಿ ವ್ಯಾಪ್ತಿಗೆ ಪ್ರಾದೇಶಿಕ

ವರ್ಗ, ಮುನ್ನೂರು ಮೈಲಿಯಿಂದ ನಾಲ್ಕುನೂರು ಮೈಲಿ ಮತ್ತು ಅದಕ್ಕೂ ಅಧಿಕವ್ಯಾಪ್ತಿ ಹೊಂದಿದ ಕಾವ್ಯಗಳಿಗೆ ಪ್ರಾದೇಶಿಕಾತೀತ ಎಂದು ವರ್ಗೀಕರಿಸಲಾಗಿದೆ. ಈ ಸೂತ್ರದಡಿಯಲ್ಲಿ ಕಾಡುಗೊಲ್ಲರ ಮಹಾಕಾವ್ಯಗಳನ್ನು ಹಾಗೂ ಇತರೆ ಕಾವ್ಯಗಳನ್ನು ಹೀಗೆ ವರ್ಗೀಕರಿಸಬಹುದು.

1) ಸ್ಥಳೀಯ ವರ್ಗ (10 ರಿಂದ 100 ಮೈಲು) : ಈರಗಾರರ ಕಾವ್ಯಗಳು

2) ಉಪಪ್ರಾದೇಶಿಕ ವರ್ಗ (100 ರಿಂದ 200 ಮೈಲು) : ಪಾತಪ್ಪ, ಕ್ಯಾತಪ್ಪ ಮಹಾ ಕಾವ್ಯಗಳು.

3) ಪ್ರಾದೇಶಿಕ ವರ್ಗ (200 ರಿಂದ 300 ಮೈಲು): ಎತ್ತಪ್ಪ, ಚಿತ್ತಯ್ಯ, ಕಾಟಯ್ಯ, ಮಹಾ ಕಾವ್ಯಗಳು.

4) ಪ್ರಾದೇಶಿಕಾತೀತ (300 ರಿಂದ 400 ಮೈಲು ಮತ್ತು ಅದಕ್ಕೂ ಹೆಚ್ಚು): ಜುಂಜಪ್ಪ ಮಹಾಕಾವ್ಯ.

ಈ ವರ್ಗೀಕರಣ ಪರಿಪೂರ್ಣವಲ್ಲದಿದ್ದರೂ ಒಂದು ಸ್ಥೂಲ ನೋಟವಾಗಿರುತ್ತದೆ. ದೂರದ ಅಚಿತರವೂ ಕೆಲವೊಮ್ಮೆ ಸಹ ಬದಲಾವಣೆಗೆ ಒಳಗಾಗಬಹುದಾಗಿರುತ್ತದೆ.

**ಗಂಡಸರ ಪದಗಳು – ಹೆಂಗಸರ ಪದಗಳು**

ಕಾಡುಗೊಲ್ಲರ ಒಟ್ಟಾರೆ ಕಾವ್ಯಸಾಹಿತ್ಯವನ್ನು ಸ್ಥೂಲವಾಗಿ ಗಂಡಸರ ಪದಗಳು ಮತ್ತು ಹೆಂಗಸರ ಪದಗಳೆಂದು ವಿಂಗಡಿಸಬಹುದಾಗಿದೆ. ಈ ಎರಡೂ ವರ್ಗದ ಪದಗಾರರ ಮನೋಧರ್ಮ ಕಾವ್ಯ ಸೃಜನೆಯಲ್ಲಿ ವಿಭಿನ್ನನೆಲೆಯಲ್ಲಿ ಪ್ರವಹಿಸುತ್ತಿರುತ್ತದೆ. ಗಂಡಸರು ಹಾಡುವ ಕಥನಗಳು ಸಾಮಾನ್ಯವಾಗಿ ವೀರರಸ ಪ್ರಧಾನವಾಗಿದ್ದು ವಿಶೇಷವಾಗಿ ಪುರುಷವೀರರನ್ನು ಕುರಿತದ್ದಾಗಿರುತ್ತವೆ. ಹೆಂಗಸರು ಹಾಡುವ ಕಥನಗಳಲ್ಲಿ ಕರುಣ ಮತ್ತು ಶೃಂಗಾರ ರಸ ಪ್ರಾಧಾನ್ಯತೆ ಪಡೆಯುತ್ತವೆ. ಮಹಾಸತಿಯರು, ಮತ್ತು ಸ್ತ್ರೀ ಸಂಕುಲಿತ ದೇವರುಗಳು ಆಧ್ಯತೆ ಪಡೆದರೂ ಸಹ ಪುರುಷ ಸಮೂಹದ ಸಾಂಸ್ಕೃತಿಕ ವೀರರು, ಉಪವೀರರು, ಅಸ್ತಿತ್ವ ಪಡೆದುಕೊಂಡಿದ್ದಾರೆ.

ಉದಾಹರಣೆಗೆ: ಜುಂಜಪ್ಪನ ಕಥನದಲ್ಲಿ–ಗಾಯಕರಲ್ಲಿ ಜುಂಜಪ್ಪನ ಸಾಹಸಗಳು, ಪವಾಡಗಳು ಪ್ರಧಾನವಾಗಿರುತ್ತವೆ. ಗಾಯಕಿಯರಲ್ಲಿ ಜುಂಜಪ್ಪನ ಹುಟ್ಟು, ಬೆಳವಣಿಗೆ ಹಾಗೂ ಸೋದರ ಮಾವಂದಿರು ಮದ್ದು ಇಡುವ ಸನ್ನಿವೇಶಗಳು ವೈಭವೀಕರಣಗೊಳ್ಳುತ್ತವೆ. ಚಿತ್ತಯ್ಯನ ಕಥಾನಕದಲ್ಲಿ–ಪುರುಷಗಾಯಕರು ಚಿತ್ತಯ್ಯನ ಮುತ್ತಿನಗೊಡಗುಗಳು, ರಾಜ್ಯಭಾರ, ಬೇಟೆ, ತಿರುಗುಣಿ ಪಟ್ಟಣದ ಯುದ್ಧ ಇವುಗಳಿಗೆ ಹೆಚ್ಚು ಒತ್ತು ಕೊಟ್ಟರೆ ಗಾಯಕಿಯರು ಚಿತ್ತಯ್ಯನ ಮದುವೆ, ಸಂಸಾರ ನಿರ್ವಹಣೆ, ಚಿತ್ತಯ್ಯನ ರಸಿಕತನ, ಇವುಗಳ ಚಿತ್ರಣವನ್ನು ಕಣ್ಣಿಗೆ ಕಟ್ಟಿದಂತೆ ಅನಾವರಣ ಗೊಳಿಸುತ್ತಾರೆ. ಈ ಮಾದರಿ ಇತರೆ ಕಾವ್ಯಗಳಿಗೂ ಅನ್ವಯಿಸುತ್ತದೆ.

ಗಂಡಸರು ಏಕವ್ಯಕ್ತಿಯಾಗಿ ಗಣೆಯೊಂದಿಗೆ ಹಾಡಿದರೆ ಹೆಂಗಸರು ಸಾಮಾನ್ಯವಾಗಿ ಗಣೆಗೆ ಹಾಡುವುದಿಲ್ಲ. ಮೇಲಾಗಿ ಸಮೂಹದಲ್ಲಿ ಹಾಡುತ್ತಾರೆ. ನಾಲ್ಕು, ಆರು, ಎಂಟು ಹೀಗೆ ಸಮ ಸಂಖ್ಯೆಯಲ್ಲಿ ಕೂಡಿಕೊಂಡು ಸಮಾ ಎರಡು ಭಾಗವಾಗಿ ಒಂದು ಗುಂಪು ಮುಮ್ಮೇಳವಾಗಿ ಹಾಡಿದರೆ ಅದೇ ಸೊಲ್ಲು, ಸಾಲುಗಳನ್ನು ಎರಡನೇ ಗುಂಪು ಪುನರುಚ್ಚಾರ ಮಾಡುತ್ತಾರೆ. ಇವರ ಹಾಡುಗಳಲ್ಲಿ ಹಲವು ರೀತಿಯ ಲಯ, ಮಟ್ಟುಗಳು ಅಡಕವಾಗಿರುತ್ತವೆ.

ಕಾವ್ಯಕಟ್ಟುವ ಕಲೆಯಲ್ಲಿ ಅಗಾಧ ಪ್ರತಿಭಾಸಂಪತ್ತುಳ್ಳ ಕಾಡುಗೊಲ್ಲ ಪದಗಾರರಿಗೆ ಸಮುದಾಯದ ಪುರಾಣ ಪುರುಷರಿಂದ ಹಿಡಿದು ನಿನ್ನೆ ಮೊನ್ನೆಯ ಸುಪ್ರಸಿದ್ಧ ಕುಪ್ರಸಿದ್ಧರೆಲ್ಲ ಕಾವ್ಯ ವಸ್ತುವಾಗಿರುವಾಗ ಜನಜನಿತ ಗೋವಿನ ಹಾಡಾಗಲೀ, ಇದೇ ಸಮುದಾಯದ ಪ್ರಸಿದ್ಧ ಪಾಳೆಗಾರ ಬೂದಿಹಾಳು ಸಿರುಮನ್ನಪಾಲನಾಗಲೀ ಇವರ ಲಕ್ಷ್ಯಕ್ಕೇ ಬಾರದಿರುವುದು ಸೋಜಿಗದ ಸಂಗತಿಯಾಗಿದೆ.

## ಕಾಡುಗೊಲ್ಲರ ಪ್ರಸಿದ್ಧ ಪದಗಾರರು

### ಬಿದರಕೆರೆ ತೋಪಮ್ಮ

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾ. ಬಿದರಕೆರೆಯ ತೋಪಮ್ಮಳ ತಂದೆ ಎರೆಹಳ್ಳಿ ಚಿಕ್ಕಣ್ಣ, ತಾಯಿದಾಸಮ್ಮ, ಗಂಡ ಸಣ್ಣೀರಪ್ಪ/ಚಿಕ್ಕ ವಯಸ್ಸಿನಲ್ಲೇ ತನ್ನ ತಾಯಿಯಿಂದ ಪದಹೇಳುವುದನ್ನು ಕಲಿತು ಕೊಂಡಿದ್ದ ಈಕೆ ಮದುವೆಯ ನಂತರವೂ ತನ್ನ ಅತ್ತೆ ಸಣ್ಣಮ್ಮನೊಡನೆ ಹಾಡುವುದು ಮುಂದುವರಿಯಿತು.

ಅಕ್ಷರದ ಗಂಧಗಾಳಿಯೂ ಗೊತ್ತಿಲ್ಲದ ತೋಪಮ್ಮ ಹಾಡುತ್ತಾ ಕುಳಿತರೆ ಹಗಲು-ರಾತ್ರಿಯ ಪರಿವೆಯೇ ಇರುತ್ತಿರಲಿಲ್ಲ. ಈಕೆಯ ಮನದ ಕೋಶದಲ್ಲಿ 'ಬುಡುರುಕುಂಟೆ ಈರೋಬಮ್ಮ, ಕರಿಯೊಬನಹಳ್ಳಿಮಾರಕ್ಕ, ಗೊಲ್ಲಳ್ಳಿಗೊಲ್ಲಳಮ್ಮ, ಮೊದಲಾದ ಹೆಣ್ಣು ದೇವತೆಗಳು, ಜುಂಜಪ್ಪ ನಂದಿಹಳ್ಳಿ ರಂಗಪ್ಪ, ಹೂವಿನಹಳ್ಳಿಈರಪ್ಪ ಎಂಬ ಗಂಡುದೇವತೆಗಳು, ಮದಕರಿನಾಯಕ, ಹರ್ತಿಕೋಟೆ ಪಟೇಲ್ ತಿಪ್ಪಯ್ಯ ಎಂಬ ಐತಿಹಾಸಿಕ ವ್ಯಕ್ತಿಗಳು, ಗಂಗೆಗೌರಿ, ಜೋಗುಳದ ಪದ, ಪಾಂಡವರ ಪದ, ಕೊರವಂಜಿ ಪದ ಈತೆರನಾಗಿ ವೈವಿಧ್ಯಮಯವಾದ ಪದಗಳ ರಾಶಿಯೇ ಇದೆ. ಈಕೆಯ ಪ್ರತಿಭೆಯನ್ನು ಗಮನಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ **1980** ರಲ್ಲೇ ಪ್ರಶಸ್ತಿ ನೀಡಿ ಗೌರವಿಸಿದೆ. ವಿಶೇಷವೆಂದರೆ **ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ಪ್ರಶಸ್ತಿಪಡೆದ ಕರ್ನಾಟಕದ ಪ್ರಥಮ ಮಹಿಳೆ** ಎಂಬ ಹೆಗ್ಗಳಿಕೆ ಈ ತಾಯಿಯದು.

**ಸೂರಪ್ಪ**

ಹಾಸನಜಿಲ್ಲೆಯ ಅರಸೀಕೆರೆ ತಾ. ಶಿವಪುರದ ಗೊಲ್ಲರಹಟ್ಟಿ ಸೂರಪ್ಪನ ಜನ್ಮಸ್ಥಳ. ಇವರ ತಂದೆ ಚಿತ್ತಯ್ಯ, ತಾಯಿ ಪಾಲಮ್ಮ\ಶಾಲೆಯ ದಾರಿಯನ್ನೇ ಕಾಣದ ಸೂರಪ್ಪ ಕಂಠಸ್ಥವಾಗಿ ತಲತಲಾಂತರದಿಂದ ಹರಿದುಕೊಂಡು ಬಂದಿದ್ದ ಕಾವ್ಯ-ಕಥೆಗಳನ್ನು ಬಾಲ್ಯದಿಂದಲೇ ಆಸಕ್ತಿಯಿಂದ ಅಭ್ಯಾಸಮಾಡಿಕೊಂಡು ಪ್ರಾಯತುಂಬಿದಾಗ ಊರೂರು ಸುತ್ತಿ ಪದ ಹಾಡಲು ಆರಂಭಿಸಿದರು. ಜುಂಜಪ್ಪನ ಕಥೆ, ಬಾಲನಾಗಮ್ಮ, ಪುಣ್ಯವಂತೆ-ಗುಣವಂತೆ, ರುದ್ರಕುಮಾರ, ಮಾಗಡಿಕೆಂಪೇಗೌಡ ಮುಂತಾದ ಕಾವ್ಯಗಳು ಸೂರಪ್ಪನ ಸಿರಿಕಂಠದಿಂದ ಹೊರಹೊಮ್ಮಿ ಸುತ್ತಲಿನ ಜನರನ್ನೆಲ್ಲ ಸಮ್ಮೋಹಿತಗೊಳಿಸಿವೆ. ಗಾಯಕ ಸೂರಪ್ಪ ಜುಂಜಪ್ಪನ ಪದಕ್ಕೆ ಮಾತ್ರ ಗಣೆ ಉಪಯೋಗಿಸಿದರೆ ಉಳಿದ ಪದಗಳನ್ನು ಹಾಡುವಾಗ ತಂಬೂರಿ, ದಮ್ಮಡಿ ಮತ್ತು ಚಟಿಕೆಗಳನ್ನು ಉಪಯೋಗಿಸಿದ್ದಿದೆ. ಗೊಲ್ಲ ಪದಗಾರರಲ್ಲಿ ಇದೊಂದು ಅಪರೂಪದ ಪ್ರಯೋಗ, ಮೈಸೂರು, ಬೆಂಗಳೂರು, ಚುಂಚನಗಿರಿ, ತರೀಕೆರೆ ಚಿತ್ರದುರ್ಗ ಮುಂತಾದ ಕಡೆ ಪದಗಳನ್ನು ಹಾಡಿ ಜನಮೆಚ್ಚುಗೆ ಗಳಿಸಿದರು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 1981ರಲ್ಲಿ ಪ್ರಶಸ್ತಿ ನೀಡಿ ಶ್ರೀಯುತರನ್ನು ಗೌರವಿಸಿದೆ.

**'ನಾಡೋಜ' ಸಿರಿಯಜ್ಜಿ**

ಜಾನಪದ ವಿದ್ವಾಂಸರ ಕಿವಿಗೆ ಚಿತ್ರದುರ್ಗ ಎಂಬ ಶಬ್ದ ಬಿದ್ದೊಡನೆ ಥಟಕ್ಕನೆ ನೆನಪಿಗೆ ಬರುವ ಮಹಿಳೆ ಎಂದರೆ ಸಿರಿಯಜ್ಜಿ. ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾ॥ ಯಲಗಟ್ಟೆ ಗೊಲ್ಲರಹಟ್ಟಿಯ ಗುಡ್ಡದಈರಪ್ಪ ಮತ್ತು ಕಾಡಮ್ಮ ಇವರ ಮಗಳಾಗಿ ಜನಿಸಿದ ಸಿರಿಯಮ್ಮ ತನ್ನ ಹನ್ನೆರಡನೆ ವಯಸ್ಸಿಗೆ ಅದೇ ಊರಿನ ತಿಪ್ಪೇಸ್ವಾಮಿಯವರ ಬಾಳಸಂಗಾತಿಯಾಗುತ್ತಾಳೆ. ತನ್ನ ಅಜ್ಜಿ ಹಾಗೂ ತಾಯಿಯಿಂದ ಪದಗಳನ್ನು ಕಲಿತು ಚಿಕ್ಕ ಪ್ರಾಯದಲ್ಲೇ ಹಾಡಲು ಆರಂಭಿಸಿದ ಸಿರಿಯಮ್ಮ ತನ್ನ ಬಾಳಸಂಜೆಯ ಈ ದಿನಗಳವರೆಗೆ ಎತ್ತಪ್ಪ, ಜುಂಜಪ್ಪ, ಚಿತ್ತಯ್ಯ, ಕಾಟಯ್ಯ, ಬಂಜಗೆರೆಈರಣ್ಣ, ಹಂದಿಸಿರಿಯಣ್ಣ, ಕ್ಯಾತಪ್ಪ, ಕೊಂಡದಕಾಟಮ್ಮ, ಗೌರಸಂದ್ರ ಮಾರಮ್ಮ, ಈಮೊದಲಾದ ಕಾವ್ಯಗಳನ್ನು ಹಾಡಿದ್ದಾರೆ. ಇದಲ್ಲದೆ ಮದುವೆ, ಸೋಬಾನೆ, ವಸಗೆ, ಮುಂತಾದ ಸಾಂಸ್ಕೃತಿಕ ಸಾಂದರ್ಭಿಕ ಪದಗಳು ಹೀಗೆ ಸುಮಾರು ಹತ್ತು ಸಾವಿರ ತ್ರಿಪದಿಗಳನ್ನು ತನ್ನ ಎದೆಯ ಗಣಿಯಲ್ಲಿ ಕೇಂದ್ರಿಕರಿಸಿ ಕೊಂಡಿದ್ದಾರೆ.

ಯಾರೇ ಆಗಲೀ, ಎಂಥಾ ಹೊತ್ತಿನಲ್ಲೇಆಗಲಿ ಪದ ಹೇಳಜ್ಜಿ ಎಂದಕೂಡಲೇ ಬೇಸರಿಸಿಕೊಳ್ಳದೆ, ಸಂಕೋಚವಿಲ್ಲದೆ, ನಿರಾಯಾಸವಾಗಿ ಹಗಲು ರಾತ್ರಿಗಳ ಪರಿವೇ ಇಲ್ಲದೆ, ನಿರರ್ಗಳವಾಗಿ ಹಾಡುವಂಥ ಸಿರಿಯಜ್ಜಿ, ಮಧ್ಯಕರ್ನಾಟಕದ ಸುತ್ತೆಲ್ಲ ತಿರುಗಾಡಿ ಹಾಡಿದ್ದಾರೆ-ಆನಂದಪಟ್ಟಿದ್ದಾರೆ. ಆಕಾಶವಾಣಿ, ದೂರದರ್ಶನಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಈಕೆಯ ಪ್ರತಿಭಾ ಸಂಪತ್ತನ್ನು ಮೆಚ್ಚಿ ಅಂದಿನ

ಮುಖ್ಯಮಂತ್ರಿಗಳಾದ ಆರ್.ಗುಂಡೂರಾವ್, ರಾಮಕೃಷ್ಣಹೆಗ್ಗಡೆ ಹಾಗೂ ಖ್ಯಾತ ಸಾಹಿತಿಗಳಾದ ಡಾ|| ಎ. ಕೆ. ರಾಮಾನುಜಂ, ಡಾ|| ಎಸ್. ಎಲ್. ಬೈರಪ್ಪ, ಡಾ|| ಜೀ. ಶಂ. ಪರಮಶಿವಯ್ಯ, ಡಾ||.ಹೆಚ್.ಎಲ್. ನಾಗೇಗೌಡ, ಡಾ||.ಕಾಳೇಗೌಡನಾಗವಾರ, ಪೀಟರ್ ಜೆ.ಕ್ಲಾಸ್ ಮೊದಲಾದವರು ಅಜ್ಜಿಯನ್ನು ಭೇಟಿಯಾಗಿ ಪದಗಳ ಸವಿಜೇನು ಸವಿದಿದ್ದಾರೆ. ಡಾ||ತೀ.ನಂ. ಶಂಕರನಾರಾಯಣ, ಡಾ||.ಕೃಷ್ಣಮೂರ್ತಿಹನೂರು, ಡಾ||. ಮೀರಾಸಾಬಿಹಳ್ಳಿ ಶಿವಣ್ಣ, ಮೊದಲಾದ ಜನಪದ ಸಂಶೋಧಕರು ಹಲವಷ್ಟು ಸಾಂಸ್ಕೃತಿಕ ಸಾಮಗ್ರಿಗಳನ್ನು ತಮ್ಮ ವಿದ್ವತ್ತಿನ ಜೋಳಿಗೆಗೆ ತುಂಬಿಸಿಕೊಂಡಿದ್ದಾರೆ. ಇಂತಹ ಸಂದರ್ಭಗಳು ಬಹುತೇಕ ಕಲಾವಿದರಿಗೆ ಲಭ್ಯ ವಾಗುವುದಿಲ್ಲ. ಲಭ್ಯವಾದರೂ ಆಸನ್ನಿವೇಶಗಳ ಸ್ವಾರಸ್ಯಗಳನ್ನು, ಮಹತ್ವವನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ಹೀಗಿರುವಾಗ ಸಿರಿಯಜ್ಜಿ ಮಾತ್ರ ಇವರೆಲ್ಲರಿಗಿಂತ ಭಿನ್ನ. ತಾನುಕಂಡಂತಹ ಗಣ್ಯ ರಾಜಕಾರಿಣಿಗಳ, ಸಂಶೋಧಕ, ಸಾಹಿತಿಗಳ ಸನಿಹದಲ್ಲಿ ತನಗುಂಟಾದ ಸ್ವಾರಸ್ಯಕರ ಅನುಭವಗಳನ್ನು ಇಂದಿಗೂ ತನ್ನ ಬಂಧುಬಳಗ ಹಾಗೂ ಆಸಕ್ತಜನರಿಗೆ ಚಾಚು ತಪ್ಪದೆ ಹಂಚಿಕೊಳ್ಳುತ್ತಾರೆ.

ಸಿರಿಯಜ್ಜಿಯ ಹಾಡುಗಾರಿಕೆಯ ವಿಶೇಷತೆ ಇರುವುದು ಆಕೆಯ ಜ್ಞಾಪಕಶಕ್ತಿಯಲ್ಲಿ. ಸಾಮಾನ್ಯ ವಾಗಿ ಹಾಡುಗಾರರು ಹಾಡುವಾಗ ಮಧ್ಯದಲ್ಲಿ ತಡೆಯುಂಟಾದಾಗ ಮತ್ತೆ ಹಿಂದಿನಿಂದ ಆರಂಭಿಸಿ ಮುಂದೆಹೋಗುವ ಪರಿಪಾಠವಿದೆ. ಸಂಗ್ರಾಹಕರ ಮುಂದೆಯಂತೂ ಹಾಡುವುದು ಅಷ್ಟುಸುಲಭದ ಕೆಲಸವಲ್ಲ. ಸಿರಿಯಜ್ಜಿ, ಇದಕ್ಕೆಲ್ಲ ವ್ಯತಿರಿಕ್ತ. ಹಾಡುಗಳನ್ನು ನಿಧಾನವಾಗಿ ಹೇಳುತ್ತಲೇ ಸಂಗ್ರಾಹಕರಿಗೆ ಏನೂ ತೊಂದರೆ ಆಗದಂತೆ ಎಚ್ಚರವಹಿಸುತ್ತಾಳೆ. ತಡೆಯಾದರೆ ಮತ್ತೆ ಹಿಂದಕ್ಕೆ ಹೋಗದೆ ಎಲ್ಲಿ ತಡೆಯಾಗಿತ್ತೋ ಅಲ್ಲಿಂದಲೇ ಮುಂದೆ ಸಾಗುತ್ತಾರೆ. ಇದರೊಂದಿಗೆ ಹಾಡುಗಳನ್ನು ಅರ್ಥೈಸುವ, ವಿಶ್ಲೇಷಿಸುವ ಸಾಮರ್ಥ್ಯವೂ ಇದೆ.

ಸಿರಿಯಜ್ಜಿಯನ್ನು ಹತ್ತಾರು ಸಂದರ್ಭಗಳಲ್ಲಿ ಪ್ರೇರೇಪಿಸಿ ಪ್ರೋತ್ಸಾಹಿಸಿದವರೆಂದರೆ ಅನುಭಾವಿ ಸಾಹಿತಿ ಬೆಳಗೆರೆ ಕೃಷ್ಣಶಾಸ್ತ್ರೀಯವರು. ಸಿರಿಯಜ್ಜಿಯ ಬೆಳವಣಿಗೆಯ ಪ್ರತಿಹಂತದಲ್ಲೂ ಶ್ರೀಯುತರ ಪಾತ್ರ ಅತಿ ಮುಖ್ಯವಾದುದು. ಈಕೆಯ ಪ್ರತಿಭಾಗಣಿಯಿಂದ ಜಾನಪದ ಸಂಪತ್ತನ್ನು ಅಗಾಧವಾಗಿ ಹೊರತೆಗೆದು ಜಾನಪದ ಲೋಕಕ್ಕೆ ಬೆಳಕು ಕಾಣಿಸಿದವರು ಡಾ||. ಕೃಷ್ಣಮೂರ್ತಿಹನೂರು ಮತ್ತು ಡಾ||.ಮೀರಾಸಾಬಿಹಳ್ಳಿ ಶಿವಣ್ಣನವರು. ಡಾ||. ಹನೂರುರವರು 'ಕತ್ತಾಲದಾರಿದೂರ' ಮತ್ತು 'ಜನಪದ ವೀರಗೀತೆಗಳು' 'ಸಾವಿರದ ಸಿರಿಬೆಳಗು' ಸಂಕಲನದಲ್ಲಿ ಸಿರಿಯಜ್ಜಿಯ ಹಾಡುಗಳನ್ನು ಪ್ರಕಟಿಸಿದ್ದಾರೆ. ಡಾ||.ಮೀ.ಶಿವಣ್ಣನವರು 'ಗಣೆಯದನಿ' ಎಂಬ ತಮ್ಮ ಕೃತಿಯನ್ನು ಸಿರಿಯಜ್ಜಿಗೇ ಸಮರ್ಪಿಸಿದ್ದಾರೆ. ಸಿರಿಯಜ್ಜಿ ಹಾಡಿದ ಕೆಲವು ಮುಖ್ಯ ಕಥನಗೀತೆಗಳು ಇಂಗ್ಲಿಷ್‌ಗೆ ಭಾಷಾಂತರಿಸಲ್ಪಟ್ಟಿದ್ದು ಅವನ್ನು ನಾಗಪುರದ ದಕ್ಷಿಣವಲಯ ಸಾಂಸ್ಕೃತಿಕ ಕೇಂದ್ರ ಪ್ರಕಟಿಸಿದೆ.

**'ಕಳ್ಳೆಸಾಲಿನ ಕಾಡುಕೋಗಿಲೆ'** ಸಿರಿಯಜ್ಜಿಯ ಪ್ರತಿಭಾ ಸಂಪತ್ತನ್ನು ಗುರುತಿಸಿದ ನಾಡಿನ ನೂರಾರು ಸಂಘ ಸಂಸ್ಥೆಗಳು, 'ಜನಪದಸಿರಿ', ಜಾನಪದ ಸರಸ್ವತಿ, ಜನಪದ ಕಂಪ್ಯೂಟರ್, 'ಹತ್ತು ಸಾವಿರ ಪದಗಳ ಒಡತಿ'... ಮುಂತಾಗಿ ಬಿರುದಗಳನ್ನು ನೀಡಿ ಸನ್ಮಾನಿಸಿ ಗೌರವಿಸಿದೆ. ಇಷ್ಟಲ್ಲದೆ 1975ರಲ್ಲಿ ಚಿತ್ರದುರ್ಗದಲ್ಲಿ ಜರುಗಿದ ರಾಜ್ಯ ಜನಪದ ಕಲಾಮೇಳದಲ್ಲಿ ಗೌರವಸನ್ಮಾನ, 1982ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, 50ನೇ ಗಣರಾಜ್ಯೋತ್ಸವ ಪ್ರಶಸ್ತಿ, 1998ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ಸಿರಿಯಜ್ಜಿಯ ಮನೆಬಾಗಿಲನ್ನು ಅರಿಸಿಕೊಂಡು ಬಂದಿವೆ. 2004 ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯ ಸಿರಿಯಜ್ಜಿಗೆ **'ನಾಡೋಜ'** ಪ್ರಶಸ್ತಿಯ ಮತ್ತೊಂದು ಗೌರವದ ಗರಿಯನ್ನು ಮುಡಿಸಿದೆ. ಮುಂದಿನ ಹೆಜ್ಜೆಯಾಗಿ ಕರ್ನಾಟಕ ಸರ್ಕಾರ ಪ್ರತಿಷ್ಠಿತ **'ಜಾನಪದಶ್ರೀ'** ಪ್ರಶಸ್ತಿಯನ್ನೂ ಸಹ ನೀಡುವುದರ ಮೂಲಕ ಸಿರಿಯಜ್ಜಿಯ ಪ್ರತಿಭಾ ಸಂಪತ್ತನ್ನು ಮತ್ತಷ್ಟು ಬೆಳಗಿಸಿದೆ. ಪ್ರೊ॥ ಬರಗೂರು ರಾಮಚಂದ್ರಪ್ಪನವರು ತಮ್ಮ ನಿರ್ದೇಶನದ ಜನಪದ ಚಿತ್ರದಲ್ಲಿ ಸಿರಿಯಜ್ಜಿಗೆ ಗೌರವ ಪಾತ್ರವೊಂದನ್ನು ನೀಡಿರುವುದು ಜನಪದ ಲೋಕಕ್ಕೆ ಸಂದ ಗೌರವವಾಗಿದೆ.

**ಗಿಡ್ಡಜ್ಜ**

ಚಿತ್ರದುರ್ಗಜಿಲ್ಲೆ ಚಳ್ಳಕೆರೆ ತಾ॥ ಕಾಟಪ್ಪನಹಟ್ಟಿಯಲ್ಲಿ ಜನಿಸಿದ ಗಿಡ್ಡಜ್ಜ ಓರ್ವ ಅಭಿಜಾತ ಕಲಾವಿದ. ಜುಂಜಪ್ಪನ ಸಮಗ್ರ ಕಥೆಯನ್ನು ಅತ್ಯಂತ ಸ್ವಾರಸ್ಯಪೂರ್ಣವಾಗಿ, ಹಲವುರಾತ್ರಿಗಳ ನಿರಂತರಾಗಿ ಹಾಡುವ ಕೆಲವೇ ಕೆಲವು ಪದಗಾರರಲ್ಲಿ ಗಿಡ್ಡಜ್ಜನೂ ಒಬ್ಬ. 'ಕಂಬಳಿಹಾಸಿ ಹಣೆಗೆ ವಿಭೂತಿ ಹಚ್ಚಿ ಊದಿನಕಡ್ಡಿ ಬೆಳಗೀಗೆ ನಮಸ್ಕರಿಸಿ ಕಿವಿಗಳನ್ನು ಹಸ್ತದಿಂದ ಮುಚ್ಚಿಕೊಂಡು ಅರ್ಧ ಕಣ್ಣು ಮುಚ್ಚಿ ತಾರಕ ಸ್ವರದಲ್ಲಿ ಕಲಿವೀರ ಜುಂಜಪ್ಪನನ್ನು ಕುರಿತು ಹಾಡತೊಡಗಿದನೆಂದರೆ ಕಲಿಯುಗ ಜನಪದಯುಗವಾಗಿ ಬಿಡುತ್ತಿತ್ತು. ಗಣೆಯನಾದದ ಓಂಕಾರ ಭೃಂಗದ ಬೆನ್ನೇರಿ ಬಂದ ಕಲ್ಪನಾವಿಲಾಸದಲ್ಲಿ ತೇಲುತ್ತಿತ್ತು. ಯಾವುದೋ ಕಾಲಾತೀತ ನಾದದ ಜಾನಪದ ಪ್ರಪಂಚದಲ್ಲಿ ಸಾಗುತ್ತಿರುವ ರೋಮಾಂಚನಕಾರಿ ಅನುಭವದ ರಸದೂಟವನ್ನು ಗಿಡ್ಡಜ್ಜ ಬಡಿಸುತ್ತಿದ್ದ".–ಇವು ಡಾ॥ ಮೀ.ಶಿ ಯವರಗಿಡ್ಡಜ್ಜನ ಬಗೆಗಿನ ಮನದಾಳದ ಮಾತುಗಳು. ಸಾವಿರಾರು ಪುಟಗಳಾಗುವಷ್ಟು ಗಣೆಪದಗಳನ್ನು ನೆನಪಿನಶಕ್ತಿಯಿಂದಲೇ ಹಾಡುತ್ತಿದ್ದ ಜುಂಜಪ್ಪನ ಪದಗಳ ಈ ಜಾದುಗಾರನ ಪದಗಳು ಆಕಾಶವಾಣಿಯಲ್ಲಿ ಹಲವುಸಾರಿ ಪ್ರಸಾರಗೊಂಡಿವೆ. ಉಡುಪಿಯ ಪ್ರಾದೇಶಿಕ ಜನಪದ ರಂಗಕಲೆಗಳ ಅಧ್ಯಯನಕೇಂದ್ರದಲ್ಲಿ ಜುಂಜಪ್ಪನ ಪದಗಳನ್ನು ಆಡಿಯೋ ವಿಡಿಯೋ ಮಾಡಲಾಗಿದೆ. ಚಿತ್ರದುರ್ಗದಲ್ಲಿ ಜರುಗಿದ ರಾಜ್ಯಮಟ್ಟದ ಜನಪದ ಕಲಾಮೇಳದಲ್ಲಿ ಈ ಕಲಾವಿದನಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**ಮಾಡ್ಗಾನಹಟ್ಟಿ ದಾಸಪ್ಪ**

ತುಮಕೂರುಜಿಲ್ಲೆಯ ಮಧುಗಿರಿತಾಲ್ಲೂಕಿನ ಮಡ್ಗಾನಹಟ್ಟಿಯ ಬಸವಚಿಕ್ಕಣ್ಣ ಮತ್ತು ಚಿಕ್ಕನಾಗಮ್ಮ ಇವರ ಮಗನಾಗಿ ಜನಿಸಿದ ದಾಸಪ್ಪ, ಬಾಲ್ಯದಿಂದಲೇ ತನ್ನ ತಂದೆಯ ಪದಗಳಿಂದ ಪ್ರಭಾವಿತನಾಗಿ ತಾನೂ ಪದಗಳನ್ನು ಕಲಿತು ಹಾಡಲಾರಂಭಿಸಿದ ಪ್ರಧಾನವಾಗಿ ಜುಂಜಪ್ಪನ ಕಥೆಯನ್ನು ಅಮೂಲಾಗ್ರವಾಗಿ ಅರಗಿಸಿಕೊಂಡಿರುವ ಇವರು ತನ್ನ ಅಗಾಧನೆನಪಿನ ಶಕ್ತಿಯಿಂದ ಹಾಡುತ್ತಾ\ಕುಳಿತರೆ ಕೇಳುಗರನ್ನು ಮಾಯಲೋಕಕ್ಕೆ ಕರೆದೊಯ್ಯುತ್ತಾನೆ.

ಹಂಪಿ ಕನ್ನಡ ವಿಶ್ವವಿದ್ಯಾನಿಲಯ ಈತನಿಂದ ಜುಂಜಪ್ಪನ ಸಮಗ್ರ ಕಾವ್ಯವನ್ನು ಸಂಗ್ರಹಿಸಿ ಪ್ರಕಟಿಸಿದೆ. ಸುಮಾರು **28364** ಪಾದಗಳಲ್ಲಿ ಹರಡಿಕೊಂಡಿರುವ ಜುಂಜಪ್ಪಕಾವ್ಯ ಇಂದು ಜನಪದ ಲೋಕವನ್ನು ವಿಶೇಷವಾಗಿ ಗಮನಸೆಳೆದಿದೆ. ಈ ಸಂಪುಟವನ್ನು ಡಾ. ಚಲುವರಾಜು ಸಂಪಾದಿಸಿದ್ದಾರೆ. ಡಾ॥.ಹಿ.ಚಿ.ಬೋರಲಿಂಗಯ್ಯನವರು ಗಾಯಕದಾಸಪ್ಪನವರೊಡನೆ ನಡೆಸಿದ ಸಂದರ್ಶನ ಲೇಖನವನ್ನು ಕಾವ್ಯದ ಅನುಬಂಧದಲ್ಲಿ ನಮೂದಿಸಲಾಗಿದೆ. ಸುಮಾರು ನಲವತ್ತು ಪುಟಗಳ ಸುದೀರ್ಘ ಸಂದರ್ಶನದಲ್ಲಿ ಗಾಯಕ ದಾಸಪ್ಪನವರು ಹರಿಯಬಿಟ್ಟಿರುವ ವಿಚಾರಧಾರೆಗಳು ಅತ್ಯಂತ ಮಹತ್ವಪೂರ್ಣವಾಗಿವೆ. “ಅಧ್ಯಯನಕಾರರ ಮತ್ತು ಅಧ್ಯಯನಕ್ಕೆ ಒಳಗಾದವರ ಆಶಯಗಳು ಸಮಾನ ದಿಕ್ಕಿನಲ್ಲಿ ಇರುವುದಕ್ಕಿಂತಲೂ ಎದುರುಬದರಾಗಿ ಇರುವುದೇ ಹೆಚ್ಚು. ಎಂಬ ಡಾ॥.ರಹಮತ್ ತರೀಕೆರೆಯವರ ನಿಲುವನ್ನು **(ಬುಡಕಟ್ಟು ಅಧ್ಯಯನ-ಸಂ.01, ಪುಟ:147).** ಇಲ್ಲಿಯ ಗಾಯಕ ದಾಸಪ್ಪ ಮತ್ತು ಡಾ॥ ಹಿ. ಚಿ. ಬೋರಲಿಂಗಯ್ಯ ನವರ ಮಾತುಕತೆಯ ಕೆಲವು ಪ್ರಸಂಗಗಳು ಸಾಕ್ಷೀಕರಿಸುತ್ತವೆ.

ಭೂಮಿಯಲ್ಲಿ ಜುಂಜಪ್ಪ ಮತ್ತು ಭೂತಪ್ಪನ ಗುಡಿಪೂಜಾರಿಕೆ ಮಾಡಿಕೊಂಡು ಜೀವನಸಾಗಿಸುತ್ತ ಕಾಡುಗೊಲ್ಲರ ಪುರಾಣ ಮತ್ತು ನಾಗರೀಕತೆಯ ವಿಕಾಸವನ್ನು ತನ್ನ ಸ್ಮೃತಿ ಕೋಶದಲ್ಲಿರಿಸಿಕೊಂಡಿರುವ ದೇಸಿಪರಂಪರೆಯ ಅನಧಿಕೃತ ಚರಿತ್ರಕಾರ ದಾಸಪ್ಪನವರಿಗೆ **ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 1999 ರಲ್ಲಿ ಪ್ರಶಸ್ತಿನೀಡಿ ಗೌರವಿಸಿದೆ.**

**ಇತರೆಪದಗಾರರು**

ತುಮಕೂರು ಜಿಲ್ಲೆಯ ಗುಬ್ಬಿ ತಾ. ಚಿಕ್ಕಣ್ಣ ಸ್ವಾಮಿಹಟ್ಟಿಯ **ಅಕ್ಕಮ್ಮ,** ಕಟ್ಟಿಗೋನಹಟ್ಟಿಯ **ಗುಬ್ಬಜ್ಜ,** ಸಂಪಿಗೆ ಹಟ್ಟಿಗೆಯ **ಜುಂಜಯ್ಯ,** ಮಂಡ್ಯಜಿಲ್ಲೆಯ ನಾಗಮಂಗಲ ತಾ. ಅಂಬಲ ಜೀರಹಳ್ಳಿ ಗೊಲ್ಲರಹಟ್ಟಿಯ **ಕಾಟಮ್ಮ, ದೊಡ್ಡಯ್ಯ, ಶಿಡ್ಲಮ್ಮ,** ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಶಿವಪುರಹಟ್ಟಿಯ **ಚಿಕ್ಕಣ್ಣ, ಸೂರಪ್ಪ,** ತುಮಕೂರು ಜಿಲ್ಲೆಯ ಸಿರಾ ತಾ. ಸಕ್ಕರದ **ರಂಗಪ್ಪ-** ಈ ಪದಗಾರರನ್ನು ಡಾ.ಜೀ.ಶಂಪರವರು. ತಮ್ಮ ಸಂಶೋಧನಾ ಅಧ್ಯಯನಕ್ಕೆ ಅಳವಡಿಸಿಕೊಂಡಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾ. ಹೂವಿನಹೊಳೆ ಗ್ರಾಮದ **ಗೋಪಮ್ಮ, ರಾಮಕ್ಕ, ಹಿಟ್ಟಕ್ಕಿಗೌಡ, ಪಾತಜ್ಜಿ, ಹರ್ತಿಕೋಟೆ** ಗ್ರಾಮದ **ತಿಮ್ಮಕ್ಕ, ಸಣ್ಣೀರಮ್ಮ, ಶಾಂತಜ್ಜಿ,** ಹರಿಯಬ್ಬೆ ಗ್ರಾಮದ **ನಾಗಜ್ಜ,** ರಂಗೇನಹಳ್ಳಿ ಗ್ರಾಮದ ಶೀಲವಾಡಿರಂಗಮ್ಮ, ಚಳ್ಳಕೆರೆ ತಾ|| ಚನ್ನಮ್ಮನಾಗತಿಹಳ್ಳಿಯ **ಪೂಜಾರಿ ಚಿಕ್ಕಜ್ಜಿ**–ಇವರುಗಳ ಕಾವ್ಯಕಥನಗಳು ಡಾ.ಅಂಬಳಿಕೆಹಿರಿಯಣ್ಣನವರ **'ಕಾಡುಗೊಲ್ಲರ ಜನಪದ ಗೀತೆಗಳು'** ಎಂಬ ಸಂಕಲನದಲ್ಲಿ ಪ್ರಕಟಗೊಂಡಿವೆ.

ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ರಾಯದುರ್ಗ ತಾ|| ತಾಳೀಕೆರೆ ಗ್ರಾಮದ **ಸಣ್ಣ ಈರಣ್ಣ,** ಸ್ವಾಮನೋರ **ಕ್ಯಾತಪ್ಪ,** ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾ. ಬಂಜಗೆರೆ ಗ್ರಾಮದ **ಭೂಮನೋರ ಗೌರಮ್ಮ, ಉಳ್ಳಿ ಬಡಮ್ಮ, ಅಜ್ಜಿಮಜ್ಜಿಗೌರಮ್ಮ, ಸಣ್ಣೀರಮ್ಮ** ಕಸ್ತೂರಿತಿಮ್ಮನಹಳ್ಳಿಯ **ದೊಡ್ಡಈರಮ್ಮ** ಇವರು ಹಾಡಿದ ಖಂಡಕಾವ್ಯಗಳು ಕಥನಗೀತೆಗಳು ಡಾ.ಕೆ.ಎಂ.ಮೈತ್ರಿ ಸಂಪಾದಿಸಿರುವ **'ಕೃಷ್ಣಗೊಲ್ಲರ ಕಥನಕಾವ್ಯಗಳು'** ಕೃತಿಯಲ್ಲಿ ಬೆಳಕು ಕಂಡಿವೆ.

ತುಮಕೂರು ಜಿಲ್ಲಾ ಶಿರಾ.ತಾ. ಮಾಗೋಡು ಗ್ರಾಮದ **ಪೂಜಾರಿಜೋಗೀರಣ್ಣ** ಹಾಡಿದ **'ಕಂಬದರಂಗನಾಥ'** ಎಂಬ ಸುದೀರ್ಘಕಾವ್ಯವನ್ನು ಡಾ. ಚಿಕ್ಕಣ್ಣಎಣ್ಣೆಕಟ್ಟೆಯವರು ಸಂಪಾದಿಸಿ ಪ್ರಕಟಿಸಿದ್ದಾರೆ. ಶ್ರೀಯುತರ ಸಂಪಾದಕತ್ವದಲ್ಲಿ **'ಚಿತ್ರ ದೇವರ ಕಾವ್ಯ'** ಎಂಬ ಮತ್ತೊಂದು ಕೃತಿ ಪ್ರಕಟವಾಗಿದ್ದು ಈ ಕಾವ್ಯದ ಹಾಡುಗಾರ ಸಿರಾ ತಾಲ್ಲೂಕು ಲಕ್ಕವ್ವನಹಳ್ಳಿ ಗೊಲ್ಲರಹಟ್ಟಿಯ **ನಿಂಗಜ್ಜ.** ಸಿರಾ ತಾಲ್ಲೂಕಿನ ಚಿಕ್ಕಬಾಣಗೆರೆಯ **ಸಣ್ಣಮೂಡ್ಲಪ್ಪ, ಈರಜ್ಜ ಈರಕಾಳಪ್ಪ, ಕರಿಯಣ್ಣ, ಸಣ್ಣೀರಪ್ಪ, ನಂಜಪ್ಪಜ್ಜ, ತಿಮ್ಮಕ್ಕ** ಈ ಕಲಾವಿದರ ಕಥನ ಕೌಶಲ್ಯವನ್ನು **'ಚಿಕ್ಕಬಾಣಗೆರೆ ಕರಿಯಮ್ಮ'** ಕೃತಿಯಲ್ಲಿ ಡಾ|| ಕೆ.ತಿಮ್ಮಯ್ಯನವರು ಸಮರ್ಥವಾಗಿಯೇ ಬಳಸಿಕೊಂಡಿದ್ದಾರೆ.

ಹೀಗೆ, ಕಾಡುಗೊಲ್ಲರಲ್ಲಿ ಆಯ್ದು, ಪ್ರಚಲಿತವಿರುವ ಹಾಗು ಗತಿಸಿಹೋಗಿರುವ ಪದಗಾರರನ್ನು ಹೆಕ್ಕುತ್ತಾ ಹೋದರೆ ಆಕಾಶದ ನಕ್ಷತ್ರಗಳನ್ನು ಎಣಿಸಿದಂತಾಗುತ್ತದೆ. ಕೊನೆಎಂಬುದೇ ಸಿಕ್ಕುವುದಿಲ್ಲ.

ಸಾಮಾನ್ಯವಾಗಿ ಆಯಾಸಮುದಾಯಗಳ ಪದಗಾರರ ಲೋಕದೃಷ್ಟಿಯೇ ಕಾವ್ಯಗಳ ಲೋಕದೃಷ್ಟಿಯೂ ಆಗಿರುತ್ತದೆ. ಹಾಗಾಗಿ ಕಾಡುಗೊಲ್ಲರ ಪದಗಾರರು ಪರಂಪರೆಯೊಂದಿಗೆ ಪ್ರಸಕ್ತ ಸಾಮಾಜಿಕ ಆರ್ಥಿಕ, ರಾಜಕೀಯ ಸಂದರ್ಭಗಳನ್ನು ಮುಖಾಮುಖಿಯಾಗಿರಿಸಿಕೊಂಡೇ ಕಾವ್ಯಗಳನ್ನು ಕಟ್ಟಿಕೊಡುತ್ತಾರೆ. ಕಲಾವಿದರು ಒಂದುಧಾರ್ಮಿಕ ಎನ್ನುವ ಆವರಣದೊಳಗೆ ನಿಂತುಕೊಂಡರೂ ಸಾಮಾಜಿಕ ಅಭಿವ್ಯಕ್ತಿಗಳು ಮಾತ್ರ ಕದಲಿರುವುದಿಲ್ಲ. ಒಟ್ಟಾರೆ ಕಾಡುಗೊಲ್ಲರ ಕಾವ್ಯಗಳಲ್ಲಿ ಪರಂಪರೆಯ ಕೊಂಡಿ ಹಾಗೂ ಸಮಕಾಲೀನ ಬದಲಾವಣೆ ಮತ್ತು ಎಚ್ಚರಗಳು ಒಡಮೂಡಿರುವುದು ದೃಗ್ಗೋಚರವಾಗಿ ಕಂಡುಬರುತ್ತವೆ.